# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆಃ 1/2020</u>

ಅ.ಸಾ. 09

ದೊ.ಸಾ. 03

| | | |
|---|---|---|
| ಸಾಕ್ಷಿಯ ಹೆಸರು | ಃ | ಫಕೀರಪ್ಪ ನವಲಗುಂದ |
| ತಂದೆ ಹೆಸರು | ಃ | ಗಂಗಪ್ಪ |
| ವಯಸ್ಸು | ಃ | 62 ವರ್ಷ |
| ಉದ್ಯೋಗ | ಃ | ಶೇತ್ಕಿ |
| ವಾಸಸ್ಥಳ | ಃ | ಹಂಗರಕಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ | 15/12/2021 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ.2 ರವಿ ಬಡಿಗೇರ ನಮ್ಮ ಊರಿನವನು. ಸುಮಾರು 2 ವರ್ಷಗಳ ಹಿಂದೆ ನಾನು ಹಂಗರಕಿಯಲ್ಲಿರುವ ನಮ್ಮ ಮನೆಯ ಮುಂದೆ ಕುಳಿತಾಗ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದಾರೆ. ಅದರಲ್ಲಿ ಬರೆದ ವಿಷಯಗಳ ಬಗ್ಗೆ ಪೊಲೀಸರು ನನಗೆ ಹೇಳಲಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ. ಚಾಸಾ.2 ಆ ದಿನ ಸದರಿ ದಾಖಲೆಗೆ ನನ್ನ ಸಮಕ್ಷಮ ಸಹಿ ಮಾಡಿಲ್ಲ. (ಸಾಕ್ಷಿ ಕಣ್ಣಿನ ಕ್ಯಾಟ್ರ್ಯಾಕ್ಟ್ ಆಪರೇಶನ್ ಮಾಡಿಸಿಕೊಂಡು ಬಂದ ಕಾರಣ ತನಗೆ ದೃಷ್ಟಿ ಸರಿ ಇರುವುದಿಲ್ಲ ಹಾಗೂ ದಾಖಲೆಗಳಲ್ಲಿ ಬರೆದಿರುವುದನ್ನು ಅಥವಾ ತನ್ನ ಸಹಿಯನ್ನು ಗುರ್ತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ).

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ</u>**

2. ದಿಃ 16/02/2018 ರಂದು ಬೆಳಿಗ್ಗೆ 11.00 ಗಂಟೆಗೆ ಪೊಲೀಸರು ತನಿಖೆ ಮಾಡಲು ಹಂಗರಕಿ ಗ್ರಾಮ ಪಂಚಾಯಿತಿಯ ಕಚೇರಿಗೆ ಬಂದಿದ್ದರು ಅನ್ನುವದು ಸರಿಯಲ್ಲ. ಆ ದಿನ ಸಾಕ್ಷಿ ಪ್ರಾಸಾ.2 ರುದ್ರಪ್ಪ ಮುರಾರಿ ಹಾಜರಿದ್ದ ಹಾಗೂ ನನ್ನಂತೆ ಚಾಸಾ.2 ರವಿ ಬಡಿಗೇರ ಬಂದಿದ್ದ ಅನ್ನುವುದು ಸರಿಯಲ್ಲ. ಪೊಲೀಸರು ಪಂಚಾಯಿತಿ ಕಚೇರಿಯನ್ನು ಪರಿಶೀಲಿಸುವಾಗ ರುದ್ರಪ್ಪ ಅವರಿಗೆ ಜಾಗವನ್ನು ತೋರಿಸಿ, ಸ್ಥಳದಲ್ಲಿ ಬಿದ್ದಿದ್ದ ಹಾಗೂ ಅರ್ಧ ಮರ್ಧ ಸುಟ್ಟ ಫೈಲುಗಳನ್ನಿಟ್ಟ ರಟ್ಟಿನ ಬಾಕ್ಸನ್ನು ಹಾಜರಪಡಿಸಿದ ಅನ್ನುವುದು ಸರಿಯಲ್ಲ. ಪೊಲೀಸರು ಅವುಗಳನ್ನು ಪಡೆದುಕೊಂಡು ನಿಪಿ.9 ರಂತೆ ಮಹಜರನ್ನು ಬರೆದು, ನನಗೆ ಓದಿ ಹೇಳಿ, ಸ್ಥಳದಲ್ಲಿ ನನ್ನ ಸಹಿ ಪಡೆದಿದ್ದಾರೆ ಅನ್ನುವುದು ಸರಿಯಲ್ಲ. ಅದಕ್ಕೆ ನನ್ನ ಸಮಕ್ಷಮ ಚಾಸಾ.2 ರವಿ ಸಹಿ ಹಾಕಿದ್ದಾನೆ ಅನ್ನುವುದು ಸರಿಯಲ್ಲ. ಆ ದಿನ ಈಗ ನನಗೆ ತೋರಿಸಿದ ಮುಮಾ.1 ನ್ನು ಅಮಾನುತ್ತಪಡಿಸಿಕೊಂಡಿದ್ದಾರೆ ಅನ್ನುವುದು ಸರಿಯಲ್ಲ.

3. ನನಗೆ ಸಂಪೂರ್ಣ ವಿಷಯಗಳು ಗೊತ್ತಿದ್ದರೂ ಸಹ ಆರೋಪಿ ನಮ್ಮ ಊರಿನವನೆಂದು ಆತನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

4. ಇಲ್ಲವೆಂದು ಹೇಳುತ್ತಾರೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

15/12/2021

(**ಉಮೇಶ ಎಂ ಅಡಿಗ**)
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.